**ಓ ಎಸ್ ನಂಃ 558-14**
**ಪಿ ಡಬ್ಲ್ಯೂ ಃ 1**

**ದಿಃ 14-12-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ** ವಾದಿ ಪರ ಶ್ರೀಮತಿ ಹೆಚ್ ಎಂ ಸಿ ವಕೀಲರಿಂದ

**9. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.**

**10.** ನಾನು ದಿನಾಂಕಃ **17-03-2004** ರ ವಿಭಾಗ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ **1** ಎಂದು ಗುರುತಿಸಲಾಯಿತು. ನಾನು ರೇವಣ್ಣಸಿದ್ದಯ್ಯರವರಿಗೆ ದಿನಾಂಕಃ **11-06-2012** ರಲ್ಲಿ ಮಾಡಿರುವ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ **2** ಎಂದು ಗುರುತಿಸಲಾಯಿತು. ನಾನು ರೇವಣ್ಣಸಿದ್ದಯ್ಯರವರಿಗೆ ದಿನಾಂಕಃ **11-06-2012** ರಲ್ಲಿ ಆಗಿರುವ ನೊಂದಾಯಿತ ದೃಢೀಕೃತ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ **3** ಎಂದು ಗುರುತಿಸಲಾಯಿತು. ನಾನು ರಾಜೀವ್ ಗಾಂಧಿ ನಿಗಮದಿಂದ ಸಾಲ ಪಡೆದ ಅರ್ಜಿಯನ್ನು ಹಾಜರುಪಡಿಸಿದ್ದು ಅದನ್ನು ಗುರುತಿಸಲು ಪ್ರತಿವಾದಿ ಪರ ವಕೀಲರು ತಕರಾರು ಮಾಡಿರುವುದರ ಮೇರೆಗೆ ಅದನ್ನು ತಕರಾರಿಗೆ ಒಳಪಟ್ಟು ಅದನ್ನು ನಿಪಿ **4** ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**